## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

**ಸಿ.ಸಿ ನಂ. 6164/2021**

ಚಾಸಾಃ 2
ಫ್ರಾಸಾಃ 2

**ದಿನಾಂಕಃ 18-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ತುಕಾರಾಮ್ |
| ತಂದೆಯ/ಗಂಡನ ಹೆಸರು | : | ಹುಚ್ಚಯ್ಯ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಏನೂ ಇಲ್ಲ |
| ವಾಸ ಸ್ಥಳ | : | ಬಿದರೆಕಾವಲು |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ದಸರೀಘಟ್ಟಕ್ಕೆ ಸೇರಿದ ಲಿಂಗರಾಜು ರವರ ಮಗ ದಿಲೀಪ್ ಎಂಬುವವರು ಈ ಕೇಸಿನಲ್ಲಿ 1 ನೇ ಆರೋಪಿ ಅವರ ಗುರುತಿನ ಬಗ್ಗೆ ಆರೋಪಿಯ ಪರ ವಕೀಲರಿಗೆ ಯಾವುದೇ ತಕರಾರು ಇರುವುದಿಲ್ಲ. ಹರಳೀಗೌಡ ರವರ ಮಗ ಅನಂತ ನನಗೆ ಗೊತ್ತು ಅವರ ಗುರುತಿನ ಬಗ್ಗೆ ಆರೋಪಿಯ ಪರ ವಕೀಲರಿಗೆ ತಕರಾರು ಇರುವುದಿಲ್ಲ. ಚಾಸಾ-1 ನನಗೆ ಗೊತ್ತು ಅವರು ನನ್ನ ಪರಿಚಯಸ್ಥರು. ಚಾಸಾ-3 ಮತ್ತು 4 ರವರು ನನಗೆ ಪರಿಚಯ ಇದಾರೆ. ಚಾಸಾ-5 ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ. ದಿಃ 30-07-2021 ರಂದು ದಸರೀಘಟ್ಟದಿಂದ ತಿಪಟೂರಿಗೆ ಚಾಸಾ-1 ರವರಿಗೆ ಸೇರಿದ ದ್ವಿ ಚಕ್ರ ವಾಹನದ ಸಂಖ್ಯೆ ಕೆಎ17-ಎಸ್-5789 ಹಿರೋಹೊಂಡ ಸ್ಪೆಂಡರ್ ದ್ವಿಚಕ್ರ ವಾಹನದಲ್ಲಿ ಬರುತ್ತಾ ಇರುವಾಗ ಮಲ್ಲದೇವರಹಳ್ಳಿ ಗೇಟ್ ಹತ್ತಿರ ಸುಮಾರು 11-45 ಗಂಟೆಗೆ ಚಾಸಾ-1 ರವರು ಗಾಡಿಯನ್ನು ಓಡಿಸಿಕೊಂಡು ಬಂದಿದ್ದರು ನಾನು ಬೈಕ್ ನ ಹಿಂಬದಿಯಲ್ಲಿ ಕುಳಿತುಕೊಂಡು ಬಂದಿರುತ್ತೇನೆ. ಬೆಸಗಿ ಕಡೆಯಿಂದ ಬಂದು ಮಲ್ಲದೇವರಹಳ್ಳಿ ಗೇಟ್ ಹತ್ತಿರ ಟ್ರಾಕ್ಟರ್ ನಲ್ಲಿ ದಿಲೀಪ್ 1 ನೇ ಆರೋಪಿಯವರು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ದ್ವಿಚಕ ವಾಹನಕ್ಕೆ ಢಿಕ್ಕಿ ಪಡಿಸಿರುತ್ತಾರೆ ಅದರಿಂದ ಎಡಗಾಲಿನ ಮಂಡಿಗೆ ಪೆಟ್ಟಾಗಿರುತ್ತದೆ, ಬಲಕಾಲಿನ ಬೆರಳಿಗೆ ಪೆಟ್ಟಾಗಿರುತ್ತದೆ. ಚಾಸಾ-1 ರವರಿಗೆ ಮಂಡಿಗೆ ಪೆಟ್ಟಾಗಿರುತ್ತದೆ. ಚಾಸಾ-3 ಮತ್ತು 4 ರವರು ನಾವು ಬಿದ್ದು 7-10 ನಿಮಿಷ ಆದ ನಂತರ ಸ್ಥಳಕ್ಕೆ ಬಂದು ಆಂಬುಲೆನ್ಸ್ ಮೂಲಕ ತಿಪಟೂರು ಸರ್ಕಾರಿ

ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತಾರೆ. ಹೆಚ್ಚಿನ ಚಿಕಿತ್ಸೆಗೋಸ್ಕರ ತಿಪಟೂರು ಸರ್ಕಾರಿ ಆಸ್ಪತ್ರೆಯಿಂದ ಹಾಸನ ಸರ್ಕಾರಿ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲೆ ಮಾಡಿ ಎಡಕಾಲಿಗೆ ತೊಡೆಯಿಂದ ಮಂಡಿವರೆಗೂ ರಾಡನ್ನು ಹಾಕಿರುತ್ತಾರೆ. ಟ್ರಾಕ್ಟರ್ ಹಳದಿ ಬಣ್ಣದಲ್ಲಿ ಎ ಎಲ್ ಟಿ ಇತ್ತು. ಅದರ ಸಂಖ್ಯೆ ಇರಲಿಲ್ಲ. ಟ್ರಾಕ್ಟರ್ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ. ಈ ಕೇಸಿಗೆ ಸಂಬಂಧಪಟ್ಟಿರುವ ಹಾಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಅಪಘಾತ ಪಡಿಸಿರುವ ಟ್ರಾಕ್ಟರನ್ನು ತೋರಿಸಿ ಸಕ್ಷಿ ಅದನ್ನು ಗುರುತಿಸಿರುತ್ತಾರೆ ಅದೆ ಆರೋಪಿ ಪರ ವಕೀಲರು ಸದರಿ ಪೋಟೋಗಳನ್ನು ನಿಶಾನೆಗಳಾಗಿ ಗುರುತಿಸಲು ಬರುವುದಿಲ್ಲ ಅದಕ್ಕೆ ಸಂಬಂಧಪಟ್ಟಿರುವ ಹಾಗೆ **section 65(b) Indian evidence Act** ಪ್ರಕಾರ ಪ್ರಮಾಣ ಪತ್ರವನ್ನು ಸಲ್ಲಿಸಿರುವ ಅದೇ ರೀತಿ ದ್ವಿಚಕ್ರ ವಾಹನದ ಪೋಟೋವನ್ನು ಹಾಜರು ಪಡಿಸಿರುವುದಿಲ್ಲ ಕಲರ್ ಜೆರಾಕ್ಸ್ ನ್ನು ಹಾಜರು ಪಡಿಸಿರುತ್ತಾರೆ. ಮೇಲೆ ಹೇಳಿರುವ ಕಾರಣದಿಂದ ಸದರಿ ಪೋಟೋಗಳನ್ನು ಮತ್ತು ಸಿಡಿಯನ್ನು ನಿಶಾನೆಗಳಾಗಿ ಗುರುತಿಸಲು ಬುರುವುದಿಲ್ಲ ಎಂದು ಆದೇಶಿಲಾಯಿತು.

ಪಾಟೀ ಸವಾಲು ಶ್ರೀ ಎಂಕೆವೈ ವಕೀಲರಿಂದಃ

ನಾನು ಬಿದರೆಕಾವಲಿನಿಂದ ಬೆಳಗ್ಗೆ 11-25 ರಿಂದ 11-30 ಸಮಯಕ್ಕೆ ಮನೆಯನ್ನು ಬಿಟ್ಟಿರುತ್ತೇವೆ. ನನ್ನ ಮನೆಗೂ ಚಾಸಾ-1 ರವರ ಮನೆಗೂ 20 ಮೀಟರ್ ದೂರದಲ್ಲಿ ಇದೆ. ಚಾಸಾ-6 ರವರು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಅವರು ನನಗೆ ಪರಿಚಯ ಎನ್ನುತ್ತಾರೆ. ಚಾಸಾ-1 ರವರು ನಮ್ಮ ಮನೆಗೆ ಬಂದು ನನ್ನನ್ನು ಕರೆದುಕೊಂಡು ಬಂದಿರುತ್ತಾರೆ ನಾನು ದಸರೀಘಟ್ಟದಿಂದ ತಿಪಟೂರಿಗೆ ಬರುತ್ತಿದ್ದೆ. ನಮ್ಮ ಊರಿನಿಂದ ದಸರೀಘಟ್ಟಕ್ಕೆ ಮಾವಿನಕೆರೆ ಕೆಂಕೆರೆಯಿಂದ, ಬುಧವಾರಸಂತೆಕಡೆಯಿಂದ, ತಿಮ್ಮನಹಳ್ಳಿಕಡೆಯಿಂದ ಬರಬಹುದು ಎಂದರೆ ಸರಿ. ಸಾಕ್ಷಿ ಆ ದಿನ ಬುಧವಾರಸಂತೆಕಡೆಯಿಂದ ದಸರೀಘಟ್ಟಕ್ಕೆ ಬಂದಿರುತ್ತೇವೆ. ಬಿದರೆಕಾವಲಿನಿಂದ ಬಂದರೆ ಬುಧವಾರಸಂತೆ ಕಡೆಗೆ ಬರುವಾಗ ರಸ್ತೆಯಲ್ಲಿ ಅಕ್ಷಯಕಲ್ಪ ಹಾಲಿನ ಡೈರಿ ಇದೆ ಎಂದರೆ ಸರಿ. ಅಕ್ಷಯಕಲ್ಪ ಹಾಲಿನ ಡೈರಿ ಒಳಗಡೆ ಹೋಗಬೇಕೆಂದರೆ ಎಡಗಡೆ ಮತ್ತು ಬಲಗಡೆ ವಾಹನಗಳು ನಿಂತಿರುತ್ತವೆ ಎಂದರೆ ನಾನು ಆ ದಿನ ಬರುವಾಗ ಯಾವುದೇ ವಾಹನಗಳು ನಿಂತಿರುವುದಿಲ್ಲ. ಬುಧವಾರಸಂತೆ ಕಡೆಯಿಂದ ಬಂದರೆ ಅಲ್ಲಿ ಸರ್ಕಲ್ ಇದೆ ಎಂದರೆ ಸರಿ. ಸದರಿ ಸರ್ಕಲ್ ನಲ್ಲಿ ತಿಪಟೂರು ಅರಸೀಕೆರೆ ಚನ್ನರಾಯಪಟ್ಟಣ ಮತ್ತು ನೊಣವಿನಕೆರೆಗೆ ಕೂಡುವಂತೆ ಸರ್ಕಲ್ ಎಂದರೆ ಸರಿ. ಅಲ್ಲಿ  ವಾಹನಗಳು ದಟ್ಟಣೆ ಇರುತ್ತದೆ ಎಂದರೆ ಸರಿ. ಅಲ್ಲಿ ವಾಹನಗಳು ದಟ್ಟಣೆ ಇರುವುದರಿಂದ ಲಿಕ್ಕರೆ ಶಾಪ್, ಪೆಟ್ರೋಲ್ ಬಂಕ್, ದೇವಸ್ಥಾನ, ವಾಸದ ಮನೆಗಳು ಮತ್ತು ಶಾಲೆ ಕೂಡ ಇದೆ ಎಂದರೆ ಸರಿ. ಅಲ್ಲಿ ವಾಸದ ಮನೆಗಳು ಶಾಲೆ, ದೇವಸ್ಥಾನ ಇರುವುದರಿಂದ ಅಲ್ಲಿ ಹಮ್ಸ್ ಗಳನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ದಸರೀಘಟ್ಟದ ಹತ್ತಿರ ಮಾತ್ರ ಹಾಕಿರುತ್ತಾರೆ ಸರ್ಕಲ್

ನಿಂದ  ಘಟನೆ ಎಂದು ಹೇಳಲಾದ ಸ್ಥಳದವರೆಗೂ ಸುಮಾರು ತಿರುವುಗಳು ಇದೆ ಎಂದರೆ ಸಾಕ್ಷಿ ಸರ್ಕಲ್ ಹತ್ತಿರ ಮಾತ್ರ ತಿರುವು ಇದೆ ಬೇರೆ ಎಲ್ಲೂ ಇಲ್ಲ ಎನ್ನುತ್ತಾರೆ ಪೆಟ್ರೋಲ್ ಬಂಕ್, ವಾಸದ ಮನೆಗಳು, ಸ್ಕೂಲ್, ದೇವಸ್ಥಾನ ಹತ್ತಿರ 3-4 ತಿರುವುಗಳು ಇದೆ ಎಂದರೆ ನಾವು ಮುಖ್ಯ ರಸ್ತೆಯಲ್ಲೇ ಬಂದಿರುತ್ತೇವೆ ಎನ್ನುತ್ತಾರೆ. ಅಪಘಾತಕ್ಕೆ ಒಳಗಾಗಿರುವ ದ್ವಿಚಕ್ರ ವಾಹನ ಚಾಸಾ-1 ರವರಿಗೆ ಸಂಬಂಧಪಟ್ಟಿದ್ದು. ಚಾಸಾ-1 ರವರೇ ವಾಹನವನ್ನು ಓಡಿಸಿರುತ್ತಾರೆ. ನಾನು ಚಸಾ-1 ರವರ ವಾಹನದಲ್ಲಿ ಹಿಂಭಾಗ ಕುಳಿತಿದ್ದೆ. ಚಾಸಾ-1 ರವರು ಹೆಲ್ಮೆಟ್ ಹಾಕಿದ್ದರು. ನಾನು ಹೆಲ್ಮೆಟ್ ಹಾಕಿರುವುದಿಲ್ಲ. ನಾನು ಬಂದಿರುವಂತಹ ರಸ್ತೆ ಏರುಮುಖವಾಗಿದೆ ಎಂದರೆ ಸಾಕ್ಷಿ ಮಾಮೂಲಿ ಇದೆ ಎನ್ನುತ್ತಾರೆ. ದಸರೀಘಟ್ಟದಿಂದ ಸರ್ಕಲ್ ಗೆ ಬರುವ ರಸ್ತೆ ಏರುಮುಖಾವಾಗಿದೆ ಎಂದರೆ ಸರಿಯಲ್ಲ. ಅಪಘಾತ ಅಂತ ಆಗಿರುವ ಸ್ಥಳದಲ್ಲಿ ಎರಡೂ ಕಡೆ ಗಿಡಗಳು, ಮುಳ್ಳಿನ ಪೊದರೆಗಳು, ಕಾಡಿನ ಗಿಡಗಳು ಬೆಳೆದಿದೆ ಎಂದರೆ ಸರಿ. ರಸ್ತೆಯ ಅಕ್ಕಪಕ್ಕದಲ್ಲಿ  ಜಮೀನುಗಳು ಇವೆ ಎಂದರೆ ಸರಿ. ಅಲ್ಲಿ ಜಮೀನಿನಲ್ಲಿ ರೈತರು ಕೃಷಿ ಮಾಡುತ್ತಿರುತ್ತಾರೆ ಎಂದರೆ  ಸರಿ. ಅಲ್ಲಿ ಕುಡಿಯುವ ನೀರು, ಪೈಪ್ ಲೈನ್ ಸರ್ಕಾರದವರು ಗ್ರಾಮದವರಿಗೆ ಸರಬರಾಜು ಮಾಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೇಮಾವತಿ ಚಾನಲ್ ಗೋಸ್ಕರ ಕೆರೆಯಿಂದ ಸಾರ್ವಜನಿಕರು ಪೈಪ್ ಲೈನ್ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಪೈಪ್ ಲೈನ್ ಗಳನ್ನು ಮಾಡಲು ಅಲ್ಲಲ್ಲಿ ರಸ್ತೆಯನ್ನು ಹಂದಕ ಹೊಡೆದಿದ್ದರು ಎಂದರೆ ಸಾಕ್ಷಿ ದಸರೀಘಟ್ಟದಿಂದ ರಸ್ತೆಯಲ್ಲಿ ಹಂದಕ (trench) ಮಾಡಿ ರಸ್ತೆಯನ್ನು ಹಗೆದಿರುತ್ತಾರೆ. ನಾನು, ಚಾಸಾ-1 ಮತ್ತು ಚಾಸಾ-4 ರವರು ದ್ವಿಚಕ್ರ ವಾಹನದಲ್ಲಿ ತ್ರಿಬಲ್ ರೈಡಿಂಗ್ ಬರುತ್ತಿದ್ವಿ ಎಂದರೆ ಸರಿಯಲ್ಲ. ತ್ರಿಬಲ್ ರೈಡಿಂಗ್ ಬರುತ್ತಾ ಇರುವ ಸಂದರ್ಭದಲ್ಲಿ ಬುಧವಾರಸಂತೆಯ ಸರ್ಕಲ್ ನಲ್ಲಿರುವ ಲಿಕ್ಕರ್ ಶಾಪ್ ನಲ್ಲಿ ಕುಡಿದು ಬಿಟ್ಟು ಚಾಸಾ-1 ರವರು ವಾಹನವನ್ನು ಓಡಿಸಿಕೊಂಡು ಬಂದರು ಎಂದರೆ ಸರಿಯಲ್ಲ. ನಾವು ತ್ರಿಬಲ್ ರೈಡಿಂಗ್ ಬಂದಿರುವುದನ್ನು ಅಲ್ಲಿ ಸ್ಥಳದಲ್ಲಿರುವ ಸಿಸಿಟಿವಿ ಯಲ್ಲಿ ಚಿತ್ರೀಕರಣ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಚಿತ್ರೀಕರಣದಲ್ಲಿ ನಾನು ಚಾಸಾ-1 ರವರ ತಪ್ಪಿನಿಂದ ಅಪಘಾತ ಆಗಿದೆ ಎಂದು ಮಾತನಾಡಿರುವುದು ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ನಿಜವಾಗಲೂ ಅಪಘಾತವಾಗಿದ್ದರೆ ನಾನು ಸಾರ್ವಜನಿಕರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲೆಯಾಗಿ ಎಂ.ಎಲ್.ಸಿ ಕೇಸು ರಿಜಿಸ್ಟರ್ ಆಗಿ ನನ್ನ ಹೇಳಿಕೆಯನ್ನು ಪೊಲೀಸರು ಬರೆದು ದಾಖಲೆ ಮಾಡುತ್ತಿದ್ದರು ಆದರೆ ನಾನು ಒಳರೋಗಿಯಾಗಿ ದಾಖಲೆ ಆಗಿರುವುದಿಲ್ಲ ಆದ್ದರಿಂದ ಎಂಎಲ್ ಸಿ ಕೇಸು ರಿಜಿಸ್ಟರ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-3 ರವರು 108 ಆಂಬುಲೆನ್ಸ್ ಗೆ ಪೋನ್ ಮಾಡಿ ಕರೆಸಿರುತ್ತಾರೆ ಚಾಸಾ-3 ರವರಿಗೆ ನಾನೇ ಪೋನ್ ಮಾಡಿ ಅಪಘಾತದ ವಿಷಯವನ್ನು ತಿಳಿಸಿರುತ್ತೇನೆ. ಅಪಘಾತದಿಂದ ನನಗೆ ಪ್ರಜ್ಞೆ ತಪ್ಪಿತ್ತು, ಬಟ್ಟೆಯಲ್ಲಿ ಕೂಡ ರಕ್ತವಾಗಿತ್ತು. ಆಂಬುಲೆನ್ಸ್ ನಲ್ಲಿ 3 ಜನ ಬಂದಿರುತ್ತೇವೆ. ನಾನು ತಿಪಟೂರು ಆಸ್ಪತ್ರೆಯಲ್ಲಿ 1 ಗಂಟೆ ಇದ್ದು ನಂತರ ಹಾಸನ ಆಸ್ಪತ್ರೆಗೆ ಅದೇ ಆಂಬುಲೆನ್ಸ್ ನಲ್ಲಿ ಹೋಗಿದ್ದಿರಾ ಎಂದರೆ ಸಾಕ್ಷಿ ಅದೇ ಆಂಬುಲೆನ್ಸ್ ನಲ್ಲಿ ಹೋಗಿರುತ್ತೇವೋ

ಎಂದು ನನಗೆ ಗೊತ್ತಿಲ್ಲ. ನನಗೆ ಚಿಕಿತ್ಸೆ ಕೊಟ್ಟಿರುವ ವೈದ್ಯರ ಹೆಸರು ಕೂಡ ನನಗೆ ಗೊತ್ತಿಲ್ಲ. ಚಿಕಿತ್ಸೆಯನ್ನು ladies ಚುಚ್ಚು ಮದ್ದು ಕೊಟ್ಟರು gents ಹೊಲಿಗೆ ಹಾಕಿರುತ್ತಾರೆ. ನನಗೆ ಅದೇ ದಿನ ದೂರನ್ನು ಕೊಡಲು ತೊಂದರೆ ಇತ್ತು. ನಾನು ಪರಿಹಾರ ಕೇಳಿ ಚಾಸಾ-1 ಮತ್ತು 1 ನೇ ಆರೋಪಿಯ ವಿರುದ್ಧ ಕೇಸನ್ನು ದಾಖಲೆ ಮಾಡಿರುತ್ತೇನೆ ಎಂದರೆ ಸರಿ. ಚಾಸಾ-1 ರವರ ನಿರ್ಲಕ್ಷ್ಯಕತೆಯಿಂದ ಅಪಘಾತ ಆಗಿದೆ ಎಂದು ಪರಿಹಾರ ಕೇಳಿ ಎಂ ವಿ ಸಿ ನಂ. 412/2023 ರ ಅರ್ಜಿಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿ ಅವರ ನಿರ್ಲಕ್ಷತೆಯಿಂದ ಅಪಘಾತ ಆಗಿರುವುದಿಲ್ಲ. ದಿಃ 26-02-2022 ರಂದು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ ನಾನು ಹೇಳಿಕೆ ಕೊಡಲು ಬರಬೇಕೆಂದು ನೋಟೀಸನ್ನು ಪೊಲೀಸರು ಕೊಟ್ಟಿರುತ್ತಾರೆ. ಚಾಸಾ-1 ರವರ ತಪ್ಪಿನಿಂದ ಅಪಘಾತ ಆಗಿರುತ್ತದೆ ಆದ್ದರಿಂದ ಆರೋಪಿಗೂ ಈ ಘಟನೆಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಲೋಡಿನಿಂದ ತುಂಬಿರುವ ಕಾರಣದಿಂದ ಅಜಾಗರೂಕತಯಾಗಿ ಬರಲು ಸಾಧ್ಯ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.